ನಿಂಗ: ನನ್ನ ಹೆಂಡ್ತಿ ನನ್ಮುಂದೆ ನಿಂತು ಮಾತಾಡ್ಲಿಕ್ಕೆ ಹೆದರ್ತಾಳೆ.
ಕೆಂಗ: ನೀನು ತುಂಬಾ ಲಕ್ಕಿ ಮಾರಾಯಾ. ನನ್ನ ಹೆಂಡ್ತಿ ದಿನಾಲೂ ಕೆಲ್ಸ ಹೇಳಿ ಜಬರಸ್ತಾಳೆ.
ನಿಂಗ: ನನ್ನ ಹೆಂಡ್ತೀನೂ ದಿನಾಲೂ ಕೆಲ್ಸ ಹೇಳ್ತಾಳೆ. ಆದ್ರೆ ಪಕ್ಕದ ರೂಮಿನಲ್ಲಿ ಕೂತ್ಗೊಂಡು ಮೊಬೈಲಲ್ಲಿ ಆದೇಶ ಮಾಡ್ತಾಳೆ.

***

ಡಾಕ್ಟರ್: ಏನ್ರೀ, ಎಂಟು ದಿನದ ಹಿಂದೆ ಬಂದಾಗ ನಿಮ್ಮ ಬಿ.ಪಿ. ಕಂಟ್ರೋಲಿನಲ್ಲಿತ್ತು. ಸಡನ್ನಾಗಿ ಏರಿದೆಯಲ್ರೀ ಏನಾಯ್ತು?
ಗಿರಿ: ನಿನ್ನೆ ನನ್ನ ಹೆಂಡ್ತಿ ತವರಿನಿಂದ ಬಂದ್ಲು ಸಾರ್.

***

ನಿಂಗನ ತಾಯಿ: ಸಾರ್, ನನ್ಮಗ ನಿಂಗ ಈಗೀಗ ಕಂಡ ಕಂಡ ಹುಡುಗಿಯರನ್ನು ತಬ್ಕೊಳ್ಳೋದು, ಅವ್ರ ತಲೆ ಬಾಚಕ್ಕೆ ಹೋಗೋದು, ಹುಡುಗಿಯರ ಹಿಂದೆ ಹಿಂದೆ ತಿರುಗೋದು ಮಾಡ್ತಿದಾನೆ. ಏನಾಗಿದೆ ಸ್ವಲ್ಪ ನೋಡಿ ಡಾಕ್ಟ್ರೇ.
ಮಾನಸಿಕ ವೈದ್ಯರು: ಏನಮ್ಮಾ ನಿನ್ಮಗ ಏನಾದ್ರೂ ಬಿಗ್‌ಬಾಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ನಾ? ಹೌದಾಗಿದ್ರೆ ಇದನ್ನ ಕಡಿಮೆ ಮಾಡೋದು ನನಗೂ ಆಗಲ್ಲ.

***

ನಿಂಗ: ಈಗ ದಿನಾಲೂ ತಪ್ಪದೇ ನೆಹರು ಸ್ಟೇಡಿಯಂಗೆ ವಾಕಿಂಗ್ ಹೋಗ್ತಾ ಇದೀನಿ.
ಕೆಂಗ: ಏನ್ಲಾ ಇದು ಪವಾಡ, ಮೊದ್ಲೆ ನೀನು ಕುಂಭಕರ್ಣ. ಅದ್ಹೆಂಗೆ ವಾಕಿಂಗ್ ಹೊಂಟೆ?
ನಿಂಗ: ಹಂಗಲ್ಲಲೇ, ಮುಂಜಾನೆ ಸ್ಟೇಡಿಯಂ ತುಂಬ ಕಾಲೇಜು ಹುಡುಗಿಯರು ವಾಕಿಂಗ್ ಮಾಡ್ತಿರ್ತಾರೆ. ಅವರ ಹಿಂದೆ ನಾನೂ ಹೋಗ್ತೀನಿ.




ಪತ್ರಿಕಾ ವರದಿಗಾರ: ಏನ್ ಸಾರ್, ನೀವು ಯುವತಿಯೊಬ್ಬಳ ಜೊತೆ ಇದ್ರಿ ಅಂತ ಟಿ.ವಿ.ಯಲ್ಲಿ ಸಿ.ಡಿ. ಪ್ರಸಾರ ಆಗ್ತಾ ಇದೆಯಲ್ಲ, ಇದಕ್ಕೆ ನೀವೇನು ಹೇಳ್ತೀರಿ?
ರಾಜಕಾರಣಿ: ಸರಿ. ನಾನು ಟೀವಿನೇ ಇನ್ನೂ ನೋಡಿಲ್ಲ. ಅವಳ ಜೊತೆಗಿರೋದು ಬಂದಿದೆಯೋ, ಇವಳ ಜೊತೆಗಿರೋ ಸಿಡೀನೋ ನೋಡಿದ ಮೇಲೆ ನಿಮಗೆ ಉತ್ತರ ಹೇಳ್ತೀನಿ.

ಕೆಂಗ: ಹಿಂಗಾದ್ರೂ ಆಗಿ ನಿನ್ನ ಹೆಲ್ತ್ ಸುಧಾರಿಸುತ್ತದೆ ಬಿಡು.

***

ನಿಂಗ: ನಾನು ಇನ್ನೊಂದು ಮದುವೆ ಮಾಡ್ಕೋಬೇಕು ಅಂದ್ಕೊಂಡೀನಿ.
ಕೆಂಗ: ಯಾಕೆ ಇನ್ನೊಬ್ಳು ಬೇಕು ಅಂತೀಯಾ?
ನಿಂಗ: ಒಬ್ಳು ಹೊಡೆದ್ರೆ, ಇನ್ನೊಬ್ಳು ರಕ್ಷಣೆ ಕೊಡ್ತಾಳೆ ಅಂತ.
ಕೆಂಗ: ನಾನೂ ಹಂಗೇ ಅಂದ್ಕೊಂಡು ಎರಡು ಮದುವೆಯಾದೆ. ಈಗ ನೋಡು ಪಡಿಪಾಟ್ಲು. ಒಬ್ಳು ಹಿಡ್ಕೊಂತಾಳೆ, ಇನ್ನೊಬ್ಳು ಹೊಡೀತಾಳೆ.

***

ನಿಂಗ: ನಾನು ನಾಕು ದಿನ ಊರಲ್ಲಿ ಇಲ್ಲಾಂದ್ರೆ ನನ್ಹೆಂಡ್ತಿ ಸ್ನಾನಾನೂ ಮಾಡಲ್ಲ.
ಕೆಂಗ: ಯಾಕೆ ನೀನೇ ಸ್ನಾನಾ ಮಾಡಿಸ್ಬೇಕಾ?
ನಿಂಗ: ಇಲ್ಲ ಬಟ್ಟೆ ತೊಳೀಬೇಕು.

***

ನಿಂಗಿ: (ಗಂಡನಿಗೆ) ರೀ, ನಿಮಗೆಷ್ಟು ಸಲ ಹೇಳ್ಬೇಕು ಕೆಲಸ ಮಾಡೋವಾಗ ಅಪ್ಪಿಕೋಬೇಡಿ ಅಂತ.
ಕೆಂಗಿ(ಕೆಲಸದಾಕೆ): ನಂಗೂ ಹಂಗೇ ಮಾಡ್ತಾರೆ ಅಮ್ಮಾವ್ರೆ. ಕೆಲಸ ಮಾಡೋಕೂ ಬಿಡಲ್ಲ. ನಂಗೂ ಹೇಳಿ ಹೇಳಿ ಸಾಕಾಗಿದೆ. ಈಗ ನೀವೇ ಹೇಳಿ.

***

ನಿಂಗಿ: ರೀ, ಮೀಟಿಂಗ್ ಇದೇಂತ ಬೆಂಗಳೂರಿಗೆ ಹೋದವ್ರು ಇಷ್ಟು ಬೇಗ ಬಂದ್ರಿ. ಮೀಟಿಂಗ್ ಕ್ಯಾನ್ಸಲ್ ಆಯ್ತಾ?
ನಿಂಗ: ಎಲ್ಲೀ ಮೀಟಿಂಗ್ ಮಾರಾಯ್ತಿ. ಬಸ್ ಆಕ್ಸಿಡೆಂಟ್ ಆಯ್ತು. ಮುಂದೆ ಕುಂತ ಹತ್ತು ಮಂದಿ ಸತ್ರು. ಒಬ್ಬೊಬ್ಬರಿಗೆ ಹತ್ತು ಲಕ್ಷ ಕೊಟ್ರು. ನಾನು ಹಿಂದೆ ಕುಂತಿದ್ದಕ್ಕೆ ಉಳ್ಕೊಂಡೆ ಗೊತ್ತಾ?
ನಿಂಗಿ: ನಿಮ್ಗೆಷ್ಟು ಸಲ ಹೇಳೀನಿ ಮುಂದೆ ಕುತ್ಗಳ್ಳೀಂತ, ನನ್ನ ಮಾತು ಕೇಳಲ್ಲ.

(ಸಂಗ್ರಹ) ಪ್ರಕಾಶ.ಎಸ್.ಮನ್ನಂಗಿ.

ಗುಂಡನಿಗೆ ಲೆಕ್ಕ ಹೇಳಿಕೊಡುತ್ತಾ ಇದ್ದ ಅವನ ಅಮ್ಮ, ನಿನ್ನ ಜೊತೆ ಇಬ್ಬರು ಗೆಳೆಯರಿದ್ದಾರೆ ಅಂತಿಟ್ಕೊ, ಈಗ ನನ್ನ ಕೈಯಲ್ಲಿ 12 ಐಸ್ ಕ್ರೀಮ್ ಇವೆ. ಒಬ್ಬನಿಗೆ ಎಷ್ಟು ಸಿಕ್ಕುತ್ತವೆ?
ಗುಂಡ: ಒಂದೊಂದು.
ಗುಂಡನ ಅಮ್ಮ: ಅದು ಹೇಗೊ?
ಗುಂಡ: ಹೇಗೆ ಅಂದರೆ, ನಿನ್ನ ವಿಷಯ ನನಗೆ ಗೊತ್ತಿಲ್ಲವಾ?

***

ಮರಿಗುಂಡನ ಮಾರ್ಕ್ಸ್ ಕಾರ್ಡ್ ನೋಡಿದ ಅವನ ಅಮ್ಮ: ಇದೇನೋ ಇದು! ಆ ದೇವರೇ ಕಾಪಾಡಬೇಕು ನಿನ್ನ.
ಮರಿಗುಂಡ: ನಮ್ಮ ಶಾಲೆ ಯಾವ ಮಟ್ಟಕ್ಕೆ ಇದೆ ಅಂತ, ಈಗಲಾದರೂ ಗೊತ್ತಾಯಿತಾ?

***

ಆಪರೇಷನ್ ಥಿಯೇಟರಿನಲ್ಲಿ....
ದೊಡ್ಡ ಡಾಕ್ಟರ್: ಈ ಪೇಷಂಟ್‌ಗೆ ಅನಸ್ತೇಷಿಯಾ ಕೊಡಿ, ಆಪರೇಷನ್ ಮಾಡೋಕೆ ನಾನು ರೆಡಿ.
ಅನಸ್ತೇಷಿಯಾ ಡಾಕ್ಟರ್: ಈ ಪೇಷಂಟ್‌ನ ಹೃದಯ ವೀಕ್ ಆಗಿದೆ. ಅರಿವಳಿಕೆ ಡೋಸ್ ತಡೆದುಕೊಳ್ತಾರ ಅಂತ ಅನುಮಾನ, ಡಾಕ್ಟರ್.
ದೊಡ್ಡ ಡಾಕ್ಟರ್: ಡೋಂಟ್ ವರಿ, ನಾನು ರಿಸ್ಕ್ ತಗೋತೀನಿ.
ಪೇಷಂಟ್: ಸರ್, ಈಗ ನಿಜವಾಗಿಯೂ ರಿಸ್ಕ್‌ನಲ್ಲಿರೋರು ಯಾರು?

(ಸಂಗ್ರಹ) ಹಾಡ್ಯ ಬ. ಜಯಾನಂದ, ಮೈಸೂರು

ಮೇಷ್ಟ್ರು: ಯಾಕೊ ಹೋಮ್ ವರ್ಕ್ ಬರೆದಿಲ್ಲ?
ಶಿಷ್ಯ: ಬರೆದಿದ್ದೀನಿ ಸಾರ್, ಮನೇಲಿಟ್ಟಿದ್ದೀನಿ.
ಮೇಷ್ಟ್ರು: ಪೂಜೆಗೆ ಇಟ್ಟಿದ್ದಿಯೇನು?
ಶಿಷ್ಯ: ನಿನ್ನೆ ಹೇಳಿದ್ರಲ್ಲ ಸಾರ್ ಅಲ್ಲಿಂದಲ್ಲಿಗೆ ಬಿಟ್ಟುಬಿಡಿ ಅಂತ.

***

ಪ್ರೇಕ್ಷಕ: ಬಿಡುಗಡೆಗೆ ಮುನ್ನ ನಮ್ಮದು ವಿಭಿನ್ನ ಸಿನಿಮಾ ಅಂತಿದ್ರಿ, ಯಾಕ್ಸಾರ್ ಓಡ್ತಿಲ್ಲ?
ನಿರ್ಮಾಪಕ: ಓಡ್ತಲ್ಲ ಥಿಯೇಟರ್ ನಿಂದ ಥಿಯೇಟರಿಗೆ,

***

ಮೇಷ್ಟ್ರು: ನಡೆದಷ್ಟೂ ಹಾದಿ, ಪಡೆದಷ್ಟೂ ವಿದ್ಯೆ
ಶಿಷ್ಯ: (ಮನದಲ್ಲೇ )ಹೊಡೆದಷ್ಟು ನಿದ್ದೆ.

***

ಪೊಲೀಸ್: ಕಳ್ಳತನ ಮಾಡಿದ್ರೆ ,ಒಂದು ಕುರುಹು ಬಿಡಬಾರದು
ಕಳ್ಳ: ನಿಮ್ಮ ಧೈರ್ಯದಿಂದ ಈ ಬಾರಿ ಯಾಮಾರಿದ್ದೀನಿ ಅಷ್ಟೇ ಸಾರ್.

***

ಗೋಪಾಲ: ನಿಮ್ಮ ಹುಡುಗಿಗೆ ಏನೇನು ಮಾಡ್ಸಿದಿರಿ?
ಹುಡುಗಿಯ ತಂದೆ: ಹುಡುಗೀನ ಎಸ್ಸೆಸ್ಸೆಲ್ಸಿ, ಪಿಯುಸಿ, ಬಿ.ಎ, ಬಿ.ಇಡ್ ಮಾಡ್ಸಿದ್ದೀವಿ.

(ಸಂಗ್ರಹ) ಮಲ್ಲಿಕಾರ್ಜುನ
ಸುರಧೇನುಪುರ